ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ರಂಗಮಂದಿರ ಕಟ್ಟಿಸುವ ಯೋಜನೆ ಇಲ್ಲ. ಆದರೆ ಬಯಲುರಂಗಮಂದಿರ ಕಟ್ಟಲು ಸ್ಥಳೀಯ ಸಂಸ್ಥೆಗಳಿಗೆ ರೂ. 1.00 ಲಕ್ಷದವರೆಗೆ ಸಹಾಯಧನ ನೀಡುವ ಯೋಜನೆ ಇದೆ.

ಆ) 1. ಇಲಾಖೆಯಿಂದ ನೇರವಾಗಿ ರಂಗಮಂದಿರ ನಿರ್ಮಿಸುವುದಿಲ್ಲ

2. ಹುಣಸೂರು ಪಟ್ಟಣದಲ್ಲಿ ಬಯಲುರಂಗಮಂದಿರ ನಿರ್ಮಾಣ ಮಾಡಲು ಹುಣಸೂರು ಪುರಸಭೆಗೆ ರೂ. 50,000-00 ಹಣ ಬಿಡುಗಡೆ ಮಾಡಿದೆ. ಕಟ್ಟಡ ನಿರ್ಮಾಣ ಪ್ರಾರಂಭ ಮಾಡಲು ಪುರಸಭೆಗೆ ತಿಳಿಸಲಾಗಿದೆ

ಬೆಳ್ತಂಗಡಿ ತಾಲ್ಲೂಕಿನಲ್ಲಿ ಕೃಷಿಕರಿಗೆ ಅರಣ್ಯ ಇಲಾಖೆಯವರು ಅತಿಕ್ರಮಣ ಭೂಮಿ ಎಂದು ನೋಟೀಸ್ ಜಾರಿಮಾಡಿರುವುದು

1101 (1161) ಶ್ರೀ ಕೆ. ಪ್ರಭಾಕರ ಬಂಗೇರ (ಬೆಳ್ತಂಗಡಿ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಈಗಾಗಲೇ ಹಕ್ಕುಪತ್ರಗಳನ್ನು ಹೊಂದಿರುವ ಕೃಷಿಕರಿಗೆ ಅರಣ್ಯ ಇಲಾಖೆಯವರು ಅತಿಕ್ರಮಣ ಭೂಮಿ ಎಂದು ನೋಟೀಸ್ ಜಾರಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಕಳೆದ 50 ವರ್ಷಗಳಿಂದ ಸ್ವಾಧೀನ ಹೊಂದಿ ಆಗ್ಗೆ ಮಾಡುತ್ತಿರುವ ಕೃಷಿಕರ ಭೂಮಿಯು ಅತಿಕ್ರಮಣವೆಂದು ನೋಟೀಸ್ ಜಾತಿ ಮಾಡುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈಗಾಗಲೇ ನಿರ್ದೇಶನ ನೀಡಿ ಹಕ್ಕುಪತ್ರಗಳನ್ನು ಹೊಂದಿರುವ ರೈತರನ್ನು ರಕ್ಷಿಸುವ ದಿಶೆಯಲ್ಲಿ ಸರ್ಕಾರ ಅರಣ್ಯ ಇಲಾಖೆಗೆ ನೋಟೀಸ್ ಜಾರಿಗೊಳಿಸದಿರುವಂತೆ ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಕೆ.ಎಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಮಂಗಳೂರು ಅರಣ್ಯ ವಿಭಾಗದ ಭಾಗಶಃ ಬೆಳ್ತಂಗಡಿ ತಾಲ್ಲೂಕಿನ ವ್ಯಾಪ್ತಿಯೊಳಗೆ ಬರುವ ಬೆಳ್ತಂಗಡಿ ಅರಣ್ಯ ವಲಯದಲ್ಲಿ ಅರಣ್ಯ ಭೂಮಿ ಒತ್ತುವರಿ ಮಾಡಿದ ಬಗ್ಗೆ ಒಟ್ಟು 437 ಪ್ರಕರಣಗಳು ದಾಖಲಾಗಿರುತ್ತದೆ. ಈ ಪೈಕಿ 283 ಪ್ರಕರಣಗಳಲ್ಲಿ ಪ್ರಥಮ ವರದಿಯಲ್ಲಿ ದಾಖಲಾತಿ ಮಾಡಲಾಗಿದೆ. ಈ 283 ಪ್ರಕರಣಗಳ ಪೈಕಿ 151 ಪ್ರಕರಣಗಳಲ್ಲಿ ಅರಣ್ಯ ಕಾಯ್ದೆ 64(ಎ) ಪ್ರಕಾರ ನೋಟೀಸ್‌ನ್ನು ಜಾರಿ ಮಾಡಲಾಗಿದೆ. ಅದರಲ್ಲಿ 122 ಅತಿಕ್ರಮಣದಾರರು ತನಿಖೆಗೆ ಹಾಜರಾಗಿ ಹೇಳಿಕೆಯನ್ನು ಕೊಟ್ಟಿರುತ್ತಾರೆ. ಹಾಗೂ 24 ಮಂದಿ ಗೈರು ಹಾಜರಾಗಿದ್ದು ಮತ್ತು 5 ಮಂದಿ ನೋಟೀಸನ್ನು ತಿರಸ್ಕರಿಸಿರುತ್ತಾರೆ. ಹಾಜರಾದ 122 ಅತಿಕ್ರಮಣದಾರರ ಪೈಕಿ 28 ಅತಿಕ್ರಮಣದಾರರು ಸದರಿ ಜಮೀನನ್ನು ಹೊಂದಿರುವ ಬಗ್ಗೆ ಡಿ ನೋಟೀಸ್ ಇಲ್ಲವೇ ಸಾಗುವಳಿ ಚೀಟಿಯ ಛಾಯಾಪ್ರತಿಗಳನ್ನು ಕೊಟ್ಟಿರುತ್ತಾರೆ. ಉಳಿದವರು ಯಾರು ಯಾವ ದಾಖಲಾತಿಗಳನ್ನು ಕೊಟ್ಟಿರುವುದಿಲ್ಲ.

ಆ) ಬಂದಿರುವುದಿಲ್ಲ

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ

ಬೆಳ್ತಂಗಡಿ ತಾಲ್ಲೂಕಿನ ಅರಣ್ಯ ಇಲಾಖೆಯ ರಸ್ತೆಗಳ ಅಭಿವೃದ್ಧಿ

1102 (1162) ಶ್ರೀ ಕೆ.ಪ್ರಭಾಕರ ಬಂಗೇರ (ಬೆಳ್ತಂಗಡಿ) :

ಅ) ಬೆಳ್ತಂಗಡಿ ತಾಲ್ಲೂಕಿನ ಸಂಸ್ಥೆ- ಎಳನೀರು/ ದುಡುಪೆ/ ಸೋಮಂದಡ್ಕ ರಸ್ತೆಯು ಅರಣ್ಯ ಇಲಾಖೆ ವ್ಯಾಪ್ತಿಯಲ್ಲಿದ್ದು ಈ ರಸ್ತೆಗಳ ಸರ್ವತೋಮುಖ ಅಭಿವೃದ್ಧಿಗಾಗಿ ಇಲಾಖೆಯವರು ಕ್ರಮಗೊಳ್ಳುವರೇ?

ಆ) ಸದರಿ ರಸ್ತೆಯನ್ನು ಅರಣ್ಯ ಇಲಾಖೆಯಿಂದ ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಇ) ಈ ಪ್ರಸ್ತಾವನೆಯನ್ನು ಅರಣ್ಯ ಇಲಾಖೆಯವರು ಲೊಕೋಪಯೋಗಿ ಇಲಾಖೆಯವರಿಗೆ ಹಸ್ತಾಂತರಿಸಿರುವರೆ; ಹಾಗಿದ್ದಲ್ಲಿ ಆ ಇಲಾಖೆಯ ಮುಂದಿನ ಕ್ರಮಗಳೇನು?

ಈ) ಈ ರಸ್ತೆಯನ್ನು ಲೋಕೋಪಯೋಗಿ ಇಲಾಖೆಯವರಿಗೆ ಹಸ್ತಾಂತರಿಸಿ ಸರ್ವೋಪಯೋಗಿ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು ಇಲಾಖೆ ಕಾಲಮಿತಿಯನ್ನು ನಿಗಧಿಪಡಿಸಿದೆಯೇ?

ಶ್ರೀ ಕೆ. ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಸಂಸೆ : ಎಳನೀರು/ ದುಡುಪೆ/ಸೋಮಂದಡ್ಕ ಅರಣ್ಯ ಇಲಾಖೆಯ ಅಧಿವೇಶನದಲ್ಲಿದ್ದು ಇದು ನಾರಾವಿ ಸುರಕ್ಷಿತ ಅರಣ್ಯ ಹಾಗೂ ಕುದುರೆಮುಖ ರಾಷ್ಟ್ರೀಯ ಉದ್ಯಾನ ಪ್ರದೇಶ ವ್ಯಾಪ್ತಿಯಲ್ಲಿದೆ. ಈ ರಸ್ತೆಗೆ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಂಡಿರುವುದಿಲ್ಲ.

ಆ) ಬೆಳ್ತಂಗಡಿ ತಾಲ್ಲೂಕಿನ ನಾರಾವಿ ಸುರಕ್ಷಿತ ಅರಣ್ಯದ ಎಳನೀರು ಸೂಕ್ತ ಕಟ್ಟಿ ಪ್ರದೇಶದಿಂದ ದ್ದುಪೆ ಎಂಬಲ್ಲಿಗೆ ವಾಹನ ಸಂಚಾರಕ್ಕೆ ಸರ್ಕಾರ ಆದೇಶ ಸಂಖ್ಯೆ : 44 ದಿನಾಂಕ 01-03- 1900ರ ಅರಣ್ಯ ಅಧಿಸೂಚನೆಯಂತೆ ಯಾವುದೇ ರಸ್ತೆಯನ್ನು ಊರ್ಜಿತವಾಗಿ ಬಿಟ್ಟಿರುವುದಿಲ್ಲ. ಎಳನೀರಿನಿಂದ ದ್ದುಪೆವರೆಗಿನ ಅಂದಾಜು 7 ಕಿ.ಮೀ ಉದ್ದದ ಲೋಕೋಪಯೋಗಿ ಇಲಾಖೆಯ ಉದ್ದೇಶಿತ ರಸ್ತೆ ನಿರ್ಮಾಣ ಮಾಡುವ ಜಾಗವು ನಾರಾವಿ ಸುರಕ್ಷಿತ ಅರಣ್ಯದಲ್ಲಿ ಹಾಗೂ ಕುದುರೆಮುಖ ರಾಷ್ಟ್ರೀಯ ಉದ್ಯಾನದಲ್ಲಿ ಇರುವುದರಿಂದ ಅರಣ್ಯೇತರ ಕಾರ್ಯವಾದ ರಸ್ತೆ ಕಾಮಗಾರಿಯು ಕರ್ನಾಟಕ ಅರಣ್ಯ ಕಾಯ್ದೆ 1963 ಅರಣ್ಯ ಸಂರಕ್ಷಿತ ಅರಣ್ಯದಲ್ಲಿ ಹಾಗೂ ಕುದುರೆಮುಖ ರಾಷ್ಟ್ರೀಯ ಉದ್ಯಾನದಲ್ಲಿ ಇರುವುದರಿಂದ ಅರಣ್ಯೇತರ ಕಾರ್ಯವಾದ ರಸ್ತೆ ಕಾಮಗಾರಿಯು ಕರ್ನಾಟಕ ಅರಣ್ಯ ಕಾಯ್ದೆ 1963 ಅರಣ್ಯ ಸಂರಕ್ಷಣಾ ಕಾಯ್ದೆ 1980ನ್ನು ಉಲ್ಲಂಘನೆ ಮಾಡಿದಂತೆ ಆಗುತ್ತದೆ.